ಅ.ದಾ. ಸಂಃ 29/2014 ಪಿ.ಡಬ್ಲ್ಯು: 01

ದಿನಾಂಕಃ 04-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ **1** ಮತ್ತು **8** ನೇ ಪ್ರತಿವಾದಿಗಳ ಪರ ಶ್ರೀ.ಸಿ.ಎಂ. ವಕೀಲರಿಂದಃ

ಪ್ರಸ್ತುತ ನಾನು ಯಾವುದೇ ಕೆಲಸ ಮಾಡುತ್ತಿಲ್ಲ. ನನ್ನ ಪ್ರಸ್ತುತ ವಯಸ್ಸು 65 ವರ್ಷ. ನಾನು 6 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಸ್ಪಷ್ಟವಾಗಿ ಬರುವುದಿಲ್ಲ. ನನ್ನ ತಂದೆಯವರು 6 ನೇ ಪ್ರತಿವಾದಿಗೆ ದಿನಾಂಕ 05-10-2007 ರಂದು 5 ನೇ ಐಟಂ ಆಸ್ತಿಯನ್ನು ದಾನ ಮಾಡಿದ್ದಾರೆ ಎಂದರೆ ಸರಿ. ಸದರಿ 5 ನೇ ಐಟಂ ಆಸ್ತಿಯ ಸ್ವಾಧೀನವನ್ನು 6 ನೇ ಪ್ರತಿವಾದಿಗೆ ಬಿಟ್ಟುಕೊಟ್ಟರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ತಾನು ಸಹಿ ಮಾಡಿಲ್ಲ ಎಂದು ನುಡಿಯುತ್ತಾರೆ. ದಾನ ಪತ್ರದ ನಂತರ ಸದರಿ ಆಸ್ತಿಗಳ ಕಂದಾಯ ದಾಖಲೆಗಳು 6 ನೇ ಪ್ರತಿವಾದಿಯ ಹೆಸರಿಗೆ ಬಂದವು ಎಂದರೆ ಗೊತ್ತಿಲ್ಲ.

5 ನೇ ಐಟಂ ಆಸ್ತಿಯ ಪೈಕಿ 2.5 ಗುಂಟೆ ಜಮೀನನ್ನು ಗಂಗಪ್ಪ ರವರಿಗೆ ದಿನಾಂಕ 08.07.2010 ರಂದು 6 ನೇ ಪ್ರತಿವಾದಿಯು ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ಮಾರಾಟ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ತಾನು ಗ್ರಾಮದಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ಕ್ರಯ ಪತ್ರದ ನಂತರ ಸದರಿ 2.5 ಗುಂಟೆ ಜಮೀನಿನ ಕಂದಾಯ ದಾಖಲೆಗಳು ಸದರಿ ಗಂಗಪ್ಪನ ಹೆಸರಿಗೆ ಬದಲಾವಣೆಯಾದವು ಎಂದರೆ ಗೊತ್ತಿಲ್ಲ. ಸದರಿ 2.5 ಗುಂಟೆ ಜಮೀನನ್ನು ಸದರಿ ಗಂಗಪ್ಪ ರವರು ತನ್ನ ಮಗನಾದ 8 ನೇ ಪ್ರತಿವಾದಿಗೆ ದಾನ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ತಾನು ಗ್ರಾಮದಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ಸದರಿ 2.5 ಗುಂಟೆ ಜಮೀನಿನಲ್ಲಿ ತನ್ನ ತಂದೆಯ ನಂತರ 8 ನೇ ಪ್ರತಿವಾದಿ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಗೊತ್ತಿಲ್ಲ. ಸದರಿ ಆಸ್ತಿಯ ಮೇಲೆ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾವು ಈಗಾಗಲೇ ವಿಭಾಗ ಮಾಡಿಕೊಂಡಿದ್ದರೂ ಸಹ 1 ಮತ್ತು 8 ನೇ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಬಳಿ ಯಾವುದೇ ವಿಭಾಗ ಪತ್ರ ಇಲ್ಲ. ನಾವು ಅಣ್ಣ ತಮ್ಮಂದಿರು ವಿಭಾಗ ಮಾಡಿಕೊಂಡು ಪ್ರತ್ಯೇಕವಾಗಿ ಸ್ವಾಧೀನಾನುಭವದಲ್ಲಿ ಇದ್ದೇವೆ ಎಂದರೆ ಸರಿಯಲ್ಲ. 5 ನೇ ಐಟಂ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-
ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು